"ಕರೆಕ್ಟ್ ಅಮ್ಮಾ. ನಿಧಾನಕ್ಕೆ ನನ್ನ ಮನಸ್ಸು ಸ್ಥಿಮಿತಕ್ಕೆ ಬಂತು"

"....."

"ನಂಗೆ ನೀನು ಬೇಕು ಅಮ್ಮಾ. ಯಾವ ಕಾರಣಕ್ಕೂ, ಯಾರ ಕಾರಣಕ್ಕೂ ನಿನ್ನ ಬಿಟ್ಕೊಡೋಲ್ಲ ನಾನು. ಕಡಿದ ಸಂಬಂಧ ಜೋಡಿಸೋಕೆ ಬರ್ಬೇಡಿ ಅಂತ ಹೇಳ್ಬಿಡ್ತೀನಿ ಅಪ್ಪಂಗೆ..."

ಗಂಟಲು ಉಬ್ಬುಬ್ಬಿ ಬಂತು ಸರೋಜನಿಗೆ. ಮಗಳನ್ನು ತಾನು ಅರ್ಥೈಸಿಕೊಂಡಿದ್ದೇ ತಪ್ಪಾಗಿತ್ತಾ?

"ಹತ್ತು ಸಲ ಯೋಚನೆ ಮಾಡು. ನೀನೇನು ಸಣ್ಣೋಳಲ್ಲ..." ಅಂದಳು ಸರೋಜ.

"ನೂರು ಸಲ ಯೋಚನೆ ಮಾಡಿದ್ರೂ ಇದೇ ತೀರ್ಮಾನ. ಚೋಟುದ್ದದೋಳನ್ನ ಇಷ್ಟುದ್ದ ಬೆಳೆಸಿದ್ದು ಯಾರು? ವಿದ್ಯೆ, ಬುದ್ಧಿ ಕಲಿಸಿದ್ದು ಯಾರು? ಅಂದಿದ್ದೆಲ್ಲಾ ಅನ್ನಿಸ್ಕೊಂಡು ಸೈಸಿಕೊಂಡಿದ್ದು ಯಾರು? ಆಗೆಲ್ಲಿದ್ರು ಈ ಅಪ್ಪ?"

"ಬಾಯಿಗೆ ಬಂದ್ಹಾಗೆ ಬೈತಿದ್ಯಲ್ಲೇ..." ಅಂತಃಕರಣ ಕಲಕಿ ಕಣ್ಣೀರಿಳಿಸುತ್ತಲೇ ಕೇಳಿದಳು ಸರೋಜ.

"ಬೈಯೋದು ಯಾರಿಗೆ ಅಮ್ಮಾ? ಸಲಿಗೆ ಇದ್ದೋರಿಗೆ. ಸದರ ಇದ್ದೋರಿಗೆ. ಪ್ರೀತಿ ಇದ್ದೋರಿಗೆ. ನಮ್ಮ ಬೈಗುಳ ಕೇಳಿಸ್ಕೋತಾರೆ ಅನ್ನೋರಿಗೆ ಬೈತೀವಿ ಅಮ್ಮಾ, ಜಗಳಾನೂ ಮಾಡ್ತೀವಿ. ಪ್ರೀತಿಯ ಮತ್ತೊಂದು ಮುಖ ಅದು. ಬೇಕು ಅಂದ್ರೂ ಅಪ್ಪ ಅನ್ನಿಸ್ಕೊಂಡೋರ ಹತ್ರ ನಾನು ಹೀಗೆ ನಡ್ಕೊಳ್ಳೋಕೆ ಸಾಧ್ಯಾನಾ?"

"ಭಾರೀ ಬುದ್ಧಿವಂತೆ ಆಗ್ಬಿದ್ದಿ..."

"ಹೂಂ ಮತ್ತೆ. ನಾನೂ ಅಮ್ಮ ಆಗ್ತಿದೀನಲ್ವಾ?"

"ನಿಮ್ಮಪ್ಪ ಕೋಟಿಗಟ್ಲೆ ಗಂಟು ಮಾಡಿಟ್ಟಿರ್ತಾರೆ ಕಣೇ. ಅವರಿಗೆ ಬೆಣ್ಣೆ ಹಚ್ಚಿದ್ರೆ ನಿಂಗೇ ಲಾಭ."

"ಸುಮ್ನಿದ್ಬಿಡು. ನಂಗೆ ಸಿಟ್ಟು ಬರಿಸ್ಬೇಡ. ಬಾಯಿಗೆ ಬಂದ ಹಾಗೆ ಬೈದ್ಬಿಡ್ತೀನಿ ಮತ್ತೆ..."

"....."

"ಅಮ್ಮಾ, ನಂಗೆ ದುಡ್ಡಿನ ಚಪಲ ಇಲ್ಲ ಕಣೇ. ನಂಗೆ ನಮ್ಮಮ್ಮ ಬೇಕು. ನಮ್ಮ ಹಳ್ಳಿಮನೆ ಬೇಕು. ಹಕ್ಕಿಗಳ ಹಾಡು, ಹೂಗಳ ಪರಿಮಳ, ಅಡಿಕೆಚೊಗರಿನ ಘಮ, ಹಲಸಿನ ಹಪ್ಪಳ, ಮಿಡಿ ಉಪ್ಪಿನಕಾಯಿ..." ಮಗಳು ಹೇಳುತ್ತಲೇ ಇದ್ದಳು. ಕನಸು ಮುಂದುವರಿಯುತ್ತಿರುವ ಪರಿ ಕಂಡು ಮೂಕವಿಸ್ಮಿತಳಾಗಿದ್ದಳು ಸರೋಜ.

"ಏ ಅಮ್ಮಾ, ಮಾತಾಡಿದ್ದು ಕೇಳಿಸ್ತಿಲ್ವಾ?" ಮಗಳು ದನಿ ಏರಿಸಿ ಕೇಳಿದಾಗ ಮೈಮೇಲೆ ಎಚ್ಚರ.

"ಕೇಳಿಸ್ತಿದೆ ಕಣೇ, ಕೇಳಿಸ್ತಿದೆ..."

"ಎರಡು ದೋಣಿ ಮೇಲೆ ಕಾಲಿಡೋದು ಬೇಡ ಅಂತ ನಿನ್ನ ಅಳಿಯಾನೂ ಹೇಳಿದ್ರು. ಇಬ್ರೂ ಸೇರಿ ನಿನ್ನ ಆರಿಸ್ಕೊಂಡಿದೀವಿ. ನಿಂಗೆ ಬೇಡ್ದಿರೋರು ನಂಗೂ ಬೇಡ. ಸಾಕಿ ಬೆಳೆಸಿದೋಳ ಮೇಲೆ ಇಷ್ಟೂ ಕೃತಜ್ಞತೆ ಇಲ್ಲ ಅಂದ್ರೆ ನಾನು ಮನುಷ್ಯಜಾತಿಗೆ ಸೇರ್ತೀನಾ?"

ಹೃದಯ ತುಂಬಿ ಬಂದಂತಾಗಿ ಅಳುತ್ತಳುತ್ತಲೇ ನಕ್ಕಳು ಸರೋಜ.

## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರ ಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.